ಆವರಿಸಿತ್ತು. ಅಲ್ಲೊಂದು ಮೂಲೆಯಲ್ಲಿ ಒಂದು ಜೀವ, ಅಲ್ಲಲ್ಲಿ ಹರಿದ ಮತ್ತು ಕೊಳಕಾದ ದುಪ್ಪಿ ಹೊದ್ದು ಮುದುಡಿ ಮಲಗಿದ್ದುದು ನನ್ನ ಕಣ್ಣಿಗೆ ಅಸ್ಪಷ್ಟವಾಗಿ ಕಂಡಿತು. ನನ್ನ ಕೈಹಿಡಿದಿದ್ದ ಆ ಪುಟ್ಟ ಬಾಲಕಿ ನಿಧಾನವಾಗಿ ತನ್ನ ಹಿಡಿತ ಸಡಿಲಿಸಿದಳು. ನಾನು ನಿಶ್ಶಬ್ದವಾಗಿ ಆ ಜೀವದ ಬಳಿಗೆ ಬಂದೆ. ಸ್ವಲ್ಪ ಹೊತ್ತು ಆ ಜೀವ ಹಾಗೆಯೇ ನಿತ್ರಾಣದಿಂದ ನಿಶ್ಚಲವಾಗಿ ಮಲಗಿತ್ತು. ಕೊಂಚ ಹೊತ್ತಿನ ನಂತರ ಮಲಗಿದ್ದ ಜೀವ ಮಿಸುಕಾಡಿತು. ನಿಧಾನವಾಗಿ ತನ್ನ ಮುಖದ ಮೇಲಿದ್ದ ದುಪ್ಪಿಯನ್ನು ಸರಿಸಿತು. ಹಜಾರದಲ್ಲಿ ಮಂದವಾಗಿ ಹರಡಿದ್ದ ಬೆಳಕು ಅದರ ಮುಖದ ಮೇಲೆ ಪ್ರವೇಶಿಸಿತು. ಈಗ ನನಗೆ ಸ್ಪಷ್ಟವಾಗಿ ಆ ಜೀವದ ಮುಖ ಗೋಚರಿಸಿತು. ಸುಕ್ಕುಗಳಿಂದಲೇ ನೇಯ್ದಿದ್ದ ಮಸಿಗಟ್ಟಿದ ಮುಖ. ಆಳದ ಬಾವಿಯಲ್ಲಿದ್ದಂತೆ ಹೊಳಪಿಲ್ಲದ ಕಣ್ಣುಗಳು ಬೆಳಕನ್ನು ಎದುರಿಸಲಾಗದೆ ಅರೆಮುಚ್ಚಿದ್ದವು. ಎಲುಬಿನ ಪಂಜರದ ಮೇಲೆ ಉಸಿರಾಡುವ ತಲೆಯೊಂದನ್ನು ಬಲವಂತದಿಂದ ಕೂಡಿಸಿದಂತೆ ಕಂಡಿತು. ಮೃತ್ಯುವಿನ ಮುಖವನ್ನೇ ಕಂಡಂತಾಯಿತು. ಸಾವಿನ ಮನೆ ಸೇರಲು ಆ ಜೀವ ಕೊನೆಯ ಮೆಟ್ಟಲಿಗೆ ಬಂದು ನಿಂತಿದೆ. ಅದು ಉಸಿರಾಡುತ್ತಿದೆ ಎನ್ನುವುದನ್ನು ಅದರ ತುಟಿ ಚಲನೆಯ ಮೂಲಕ ಗೊತ್ತುಪಡಿಸಿಕೊಂಡೆ. ಪುಟ್ಟ ಬಾಲಕಿ ನಿಂತಿದ್ದ ಕತ್ತಲಿನ ಮೂಲೆಯನ್ನೇ ನೋಡುತ್ತಾ ಏನನ್ನೋ ತೊದಲಿತು. ಕತ್ತಲಲ್ಲಿ ನಿಂತಿದ್ದ ಬಾಲಕಿ ತೆಳುವಾದ ಬೆಳಕಿದ್ದ ನನ್ನ ಪಕ್ಕ ಬಂದು ನಿಂತಳು. ಅವಳ ಕೈಯೊಂದು ನನ್ನ ಸೆರಗು ಹಿಡಿಯಿತು. ನನ್ನ ಕೈ ಅರಿವಿಲ್ಲದಂತೆಯೇ ಅವಳ ತಲೆ ನೇವರಿಸುತ್ತಿತ್ತು. ಸಾವಿನ ಮನಗೆ ಹೋಗಲು ಸಿದ್ಧಳಾಗಿದ್ದವಳೇ ನನ್ನ ಸೆರಗು ಹಿಡಿದಿದ್ದ ಪುಟ್ಟ ಬಾಲಕಿಯ ನಿರ್ಭಾಗ್ಯ ತಾಯಿ. ಬಡತನ–ದಾರಿದ್ರ್ಯ ಈ ಪುಟ್ಟ ಕುಟುಂಬದ ಮೇಲೆ ಗೆಲುವು ಸಾಧಿಸಿತ್ತು. ಇದೆಲ್ಲವನ್ನೂ ವಿವರವಾಗಿ ಮನಗಾಣುವುದರೊಂದಿಗೆ ಆ ಗಳಿಗೆ ಸರಿದುಹೋಯಿತು. ನನ್ನ ಕಣ್ಣ ಮುಂದೆ ಆ ಸಾವಿನ ಮುಖದ ದೃಶ್ಯ ಮತ್ತು ಅವಳ ದಾರುಣ ಬದುಕಿನ ಕಥೆ ಮಾತ್ರ ಹಾಗೆಯೇ ಉಳಿಯಿತು!

ಪುರಿ ಭಟ್ಟಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಮಖ್ತಿಯಾರ್ ಕ್ಷಯರೋಗದಿಂದಾಗಿ ತೀರಿಕೊಂಡಿದ್ದ. ಮಕ್ಕಳಿರದಿದ್ದ ಅವಳ ಹೆಂಡತಿ ಜಬೀನಾ ಭಟ್ಟಿಯ ಮಾಲೀಕರ ಔದಾರ್ಯದಿಂದಾಗಿ ಗಂಡನ ಸಾವಿನ ನಂತರ ಅದೇ ಪುರಿ ಭಟ್ಟಿಗೆ ಕೆಲಸಕ್ಕೆ ಸೇರಿಕೊಂಡಳು. ಮದುವೆಯಾದ ಆರು ತಿಂಗಳಿಗೆ ಗಂಡನನ್ನು ಕಳೆದುಕೊಂಡಿದ್ದ ಅಂಕಾಲಮ್ಮ ತನ್ನ ಒಂದು ವರುಷದ ಮಗಳು ರೇವತಿಯೊಂದಿಗೆ ಜಬೀನಾಳ ನೆರೆಮನೆಯಲ್ಲೇ ವಾಸವಿದ್ದಳು. ಅವಳೂ ಕೂಡ ಅದೇ ಪುರಿ ಭಟ್ಟಿಗೆ ಕೆಲಸಕ್ಕೆ ಹೋಗುತ್ತಿದ್ದಳು. ಒಂದು ದಿನ ಅಂಕಾಲಮ್ಮ ತನ್ನ ಒಂದು ವರುಷದ ಮಗಳು ರೇವತಿಯನ್ನು ಬಿಟ್ಟು, ಗಾಡಿಯೊಂದರಲ್ಲಿ ಹಣ್ಣು ಮಾರುತ್ತಿದ್ದವನೊಂದಿಗೆ ಓಡಿಹೋದಳು. ತಾಯಿ ಇಲ್ಲದೆ ಅನಾಥವಾಗಿದ್ದ ಆ ಮಗುವನ್ನು ಜಬೀನಾಳೇ ತಂದು ಸಾಕಿಕೊಂಡಳು. ಎಂಥದ್ದೋ ಒಂದು ಕಾರಣದಿಂದ ಒಂದು ದಿನ ಇದ್ದಕ್ಕಿದ್ದ ಹಾಗೆ ನಗರದ ಎಲ್ಲ ವ್ಯಾಪಾರಗಳು ಬಂದ್ ಆದವು. ಆ ಸಾಲಿಗೆ ಪುರಿ ಭಟ್ಟಿಗಳೂ ಸೇರಿಕೊಂಡವು. ಇದರಿಂದಾಗಿ ಜಬೀನಾಳಿಗೆ ಇದ್ದ ಕೆಲಸದ ಮೇಲೆ ಕಲ್ಲುಬಿತ್ತು. ಮನೆಬಾಡಿಗೆ ಕಟ್ಟಲಾಗದಿದ್ದರಿಂದ ಅದರ ಮಾಲೀಕರು ಒಂದು ದಿನ ಅವರು ವಾಸವಿದ್ದ ಮನೆಯನ್ನೂ ಬಿಡಿಸಿದರು. ಕೆಲಸ ಮತ್ತು ಇರಲು ನೆಲೆಯಿಲ್ಲದ ಜಬೀನಾ ಮತ್ತು ಅವಳ ಮಗಳು ರೇವತಿ ಈಗ ಅಕ್ಷರಶಃ ಬೀದಿಪಾಲಾದರು. ಹೀಗೆ ಬೀದಿ ಪಾಲಾದರವರಲ್ಲಿ ಅವರು ಮೊದಲಿಗರೂ ಮತ್ತು ಕೊನೆಯವರೂ ಆಗಿರಲಿಲ್ಲ! ನಿರಂತರ ದುಡಿಮೆ ಮತ್ತು ಅಸಹಾಯಕತೆಯಿಂದ ಅವಳ ದೇಹ ಕುಗ್ಗುತ್ತಿತ್ತು. ಕೊನೆಗೊಂದು ದಿನ ನಿರೀಕ್ಷೆಯಂತೆಯೇ ನಿತ್ರಾಣಳಾಗಿ ಹಾಸಿಗೆ ಹಿಡಿದಳು. ಅವಳಲ್ಲಿದ್ದ ದುಡಿಯುವ ಶಕ್ತಿಯೆಲ್ಲಾ ಕುಂದಿಹೋಗಿತ್ತು. ಮಖ್ತಿಯಾರ್‌ನ ಸ್ಮರಣೆಯೊಂದನ್ನು ಬಿಟ್ಟರೆ ಜಬೀನಾಗೆ ತನ್ನ ಗತ ಜೀವನದ ಬಗ್ಗೆ ಯಾವುದೇ ಸ್ಮರಣೆಗಳು ಉಳಿದಿರಲಿಲ್ಲ!

ಇದೀಗ ಜಬೀನಾಳ ಜೀವ ಇಹಲೋಕ ತ್ಯಜಿಸಲು ಕ್ಷಣಗಣನೆಗೆ ತೊಡಗಿದೆ. ರೇವತಿಗೆ ಈಗ ಎಂಟು